2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 12.01.2026**

ಅಸಲು ದಾವಾ **.ಸಂ. 101/2013**
ಡಿ .ಡಬ್ಲ್ಯೂ-2

**(ಪಾಟೀ ಸವಾಲು ಶ್ರೀ. ಓ .ಡಿ.ಜಿ. ವಕೀಲರಿಂದ ವಾದಿಯರ ಪರವಾಗಿ )**

ನನ್ನ ಊರು ರುದ್ರಪಟ್ಟಣ. ನಾನು ಜಮೀನನ್ನು ಖರೀದಿ ಮಾಡಿದ್ದು, ಅದರ ವಿಚಾರಕ್ಕಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ವಾದಿ ಹರೀಶ ನನಗೆ ಗೊತ್ತು. ಅವರದು ಸಹ ರುದ್ರಪಟ್ಟಣ. ವಾದಿ ನ್ಯಾಯಾಲಯದಲ್ಲಿ ಯಾವ ವಿಚಾರಕ್ಕಾಗಿ ದಾವೆ ಹೂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಯಾರ ಪರ ಸಾಕ್ಷಿ ನುಡಿಯುತ್ತಿದ್ದೇನೆ ನಾನು ನನ್ನ ಪತ್ನಿ ಜಮೀನು ತೆಗೆದುಕೊಂಡಿದ್ದೆವು ಅದಕ್ಕಾಗಿ ಸಾಕ್ಷಿ ನುಡಿಯುತ್ತಿದ್ದೇವೆ. ನಾನು ನ್ಯಾ. ಕ್ಕೆ ಹಾಜರುಪಡಿಸಿದ ಸಾಮಾನ್ಯ ಅಧಿಕಾರ ಪತ್ರದಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ತಿಳಿದಿದೆ. ನನ್ನ ಹೆಂಡತಿಯ ಹೆಸರು ಮಂಜುಳ. ನನ್ನ ಹೆಂಡತಿಯ ತಮ್ಮ ರಘು. ರಘು ಮತ್ತು ನನ್ನ ಪತ್ನಿ ಆರೋಗ್ಯವಾಗಿದ್ದಾರೆ. ಮಂಜುಳಾ ನನ್ನ ಪತ್ನಿಗೆ ನ್ಯಾ. ಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ನನ್ನ ಪತ್ನಿಗೆ ನ್ಯಾ. ಕ್ಕೆ ಬಂದು ಸಾಕ್ಷಿ ಹೇಳಲು ಬುದ್ದಿಶಕ್ತಿ ಕಡಿಮೆ ಇರುವುದರಿಂದ ಮತ್ತು ರಘುರವರು ಮಧ್ಯಪಾನ ವ್ಯಸನಿಯಾಗಿರುವುದರಿಂದ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ. ಸದರಿ ವಿಚಾರವನ್ನು ಸಾಮಾನ್ಯ ಅಧಿಕಾರ ಪತ್ರದಲ್ಲಿ ಹೇಳಿ ಬರೆಸಲಾಗಿದೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾ. ಕ್ಕೆ ವೈದ್ಯಕೀಯ ದಾಖಲೆಯನ್ನು ಹಾಜರುಡಿಸಲಾಗಿದೆಯೇ ಎಂದರೆ ಇಲ್ಲ. ವಾದಿ ಹರೀಶರವರು ಯಾವ ಯಾವ ಸರ್ವೆ ನಂಬರ್ ಗೆ ದಾವೆ ಹೂಡಿದ್ದಾರೆ ಎಂಬುದು ಗೊತ್ತಿಲ್ಲ ಆದರೆ ನಮ್ಮ ಸರ್ವೆ ನಂ. ನ್ನು ಸೇರಿಸಿಕೊಂಡಿದ್ದಾರೆ ಎಂಬುದು ತಿಳಿದಿದೆ. ವಾದಿ ಹರೀಶನ ಅಜ್ಜನ ಹೆಸರು ಕೆಂಪೇಗೌಡ. ಕೆಂಪೇಗೌಡರಿಗೆ 3 ಜನ ಅಣ್ಣತಮ್ಮಂದಿರು.

ಅವರುಗಳೆಂದರೆ 1. ಕೆಂಪೇಗೌಡ, 2. ರಾಮೇಗೌಡ 3. ಚಲುವೇಗೌಡ. ಇವರುಗಳ ಒಡಹುಟ್ಟಿದ ಹೆಣ್ಣುಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ.

ಮುಂದುವರಿದ ಪಾಟಿ ಸವಾಲಿಗಾಗಿ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಜೆ.ಎಂ.ಎಫ್.ಸಿ,ಅರಕಲಗೂಡು.